ಪ್ರಶ್ನೆ ಸಂಖ್ಯೆ: 110(1228)

ಉಪಾಧ್ಯಕ್ಷರು:– ಮಾನ್ಯ ಕಾನೂನು ಸಚಿವರು ಇಲ್ಲ ಅವರು ಬಂದ ನಂತರ ಉತ್ತರ ಕೊಡಿಸೋಣ.

ಪ್ರಶ್ನೆ ಸಂಖ್ಯೆ: 111(1281)

ಶ್ರೀ ವಿನಯ ಕುಲಕರ್ಣಿ:– ಮಾನ್ಯ ಉಪಾಧ್ಯಕ್ಷರೆ, ನಮ್ಮ ಕ್ಷೇತ್ರದಲ್ಲಿ ಹೈಸ್ಕೂಲ್‌ಗಳಲ್ಲಿ ಇಂಗ್ಲಿಷ್ ಟೀಚರ್ಸ್ ಇಲ್ಲ. ಗ್ರಾಮೀಣ ಪ್ರದೇಶದ ಹೈಸ್ಕೂಲ್‌ಗಳಲ್ಲಿ ಕರಡಿ ಗುಡ್ಡ ಎಂದು ಒಂದು ಗ್ರಾಮ ಇದೆ, ಮಾದನ ಬಾವಿ ಎಂದು ಒಂದು ಗ್ರಾಮ ಇದೆ.

ಉಪಾಧ್ಯಕ್ಷರು:– ಮಾನ್ಯ ಕಾನೂನು ಸಚಿವರು ಉತ್ತರ ಕೊಡುತ್ತೀರಾ?

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಬರುತ್ತಾರೆ.

ಉಪಾಧ್ಯಕ್ಷರು:– ಅವರು ಬಂದ ನಂತರ ಉತ್ತರ ಕೊಡಿಸೋಣ.

ಪ್ರಶ್ನೆ ಸಂಖ್ಯೆ: 112(1250)

ಉಪಾಧ್ಯಕ್ಷರು:– ಮುಂದಿನ ಪ್ರಶ್ನೆ ಶ್ರೀ ಪ್ರಮೋದ್ ಮಧ್ವರಾಜ್‌ರವರು. ಶ್ರೀ ಪ್ರಮೋದ್ ಮಧ್ವರಾಜ್ ಪರವಾಗಿ ಶ್ರೀ ಜೆ.ಆರ್. ಲೋಬೋ ಕೇಳುತ್ತೀರಾ? ಸಚಿವರು ಇಲ್ಲ ನಂತರ ಉತ್ತರ ಕೊಡಿಸೋಣ.

ಕೇಂದ್ರ ಹಾಗೂ ರಾಜ್ಯ ಸರ್ಕಾರದ ಯೋಜನೆ

112(370); ಶ್ರೀ ಶ್ರೀನಿವಾಸ ಜಿ.ಎಚ್. (ತರೀಕೆರೆ)

ಅ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ವ್ಯಾಪ್ತಿಗೆ ಬರುವ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಯೋಜನೆಗಳು ಯಾವುವು (ಯೋಜನಾವಾರು ವಿವರ ನೀಡುವುದು):